ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: DPI-CPIOCPE1(UFP)/1/2025 – 1900278 ದಿನಾಂಕ:21.04.2026

**- ಸುತ್ತೋಲೆ -**

ವಿಷಯ: ವಿದ್ಯಾವಿಕಾಸ ಯೋಜನೆಯಡಿ 2026-27 ನೇ ಸಾಲಿಗೆ ಎಲ್ಲಾ ವಿಭಾಗದ ಜಿಲ್ಲೆಗಳ ಸರ್ಕಾರಿ ಶಾಲಾ ಮಕ್ಕಳಿಗೆ ಎರಡು ಜೊತೆ ಉಚಿತ ಸಮವಸ್ತ್ರ ಬಟ್ಟೆ ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಪಿ 102 ಎಂಪಿಇ 2025 ಬೆಂಗಳೂರು ದಿನಾಂಕ: 07.01.2026
2. ಮೆ.ಕೆ.ಹೆಚ್.ಡಿ.ಸಿ ಸಂಸ್ಥೆಗೆ ಈ ಕಛೇರಿ ಕಾರ್ಯಾದೇಶ ದಿನಾಂಕ: 27.02.2026
3. ಇ-ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಸಂಸ್ಥೆಗಳಿಗೆ ಕಾರ್ಯಾದೇಶ ದಿನಾಂಕ:23.03.2026, 02.04.2026 ಮತ್ತು 04.04.2026.

2026-27 ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳ 1 ರಿಂದ 10 ನೇ ತರಗತಿಯ ಸರ್ಕಾರಿ ಶಾಲಾ ಮಕ್ಕಳಿಗೆ ಉಲ್ಲೇಖ (1) ರಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದು, ಕೆಳಕಂಡ ಸಂಸ್ಥೆಗಳ ಮೂಲಕ ಎರಡುಜೊತೆ ಉಚಿತ ಸಮವಸ್ತ್ರ ಬಟ್ಟೆಗಳ ಸರಬರಾಜು ಕಾರ್ಯಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

| | **ಸಂಸ್ಥೆ ಹೆಸರು** | **ಸಂಸ್ಥೆ ಸರಬರಾಜು ಮಾಡುವ ಜಿಲ್ಲೆಗಳು** |
|---|---|---|
| 1 | ಮೆ: ಕ.ಹೆಚ್.ಡಿ.ಸಿ, ಬೆಂಗಳೂರು, ಕರ್ನಾಟಕ. | ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ 1 ರಿಂದ 10 ನೇ ತರಗತಿಯ ಗಂಡು ಮಕ್ಕಳಿಗೆ ಷರ್ಟಿಂಗ್ ಬಟ್ಟೆ ಮತ್ತು1 ರಿಂದ 7 ನೇ ತರಗತಿಯ ಗಂಡು ಮಕ್ಕಳಿಗೆ ಸೂಟಿಂಗ್ ಬಟ್ಟೆ ಹಾಗೂ 1 ರಿಂದ 5 ನೇ ತರಗತಿಯ ಹೆಣ್ಣು ಮಕ್ಕಳಿಗೆ ಷರ್ಟಿಂಗ್ ಬಟ್ಟೆ ಮತ್ತು ಸ್ಕರ್ಟ್ ಬಟ್ಟೆ ಒಂದು ಜೊತೆ. |
| 2 | ಮೆ :ಪದಮಚಂದ್ ಮಿಲಾಪ್‌ಚಂದ್ ಜೈನ್, ಈಚಲಕಾರಂಜಿ, ಮಹಾರಾಷ್ಟ್ರ. | 1. ಬೆಳಗಾವಿ ವಿಭಾಗದ ನಾಲ್ಕು ಜಿಲ್ಲೆಗಳಾದ ಹಾವೇರಿ, ಧಾರವಾಡ, ಉತ್ತರ ಕನ್ನಡ, ಮತ್ತು ಶಿರ್ಸಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ.<br>2. ಬೆಂಗಳೂರು ವಿಭಾಗದ ಒಂದು ಜಿಲ್ಲೆಯಾದ ದಾವಣಗೆರೆ ಜಿಲ್ಲೆಯ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ.<br>3. ಬೆಳಗಾವಿ ವಿಭಾಗದ ಮೂರು ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ ಮತ್ತು ಗದಗ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ. |
| 3 | ಮೆ: ಅರವಿಂದ್ ಕಾಟ್ಸಿನ್ ಇಂಡಿಯಾ ಲಿಮಿಟೆಡ್, ಈಚಲಕಾರಂಜಿ, ಮಹಾರಾಷ್ಟ್ರ. | 1. ಬೆಳಗಾವಿ ವಿಭಾಗದ ಎರಡು ಜಿಲ್ಲೆಗಳಾದ ಚಿಕ್ಕೋಡಿ ಮತ್ತು ವಿಜಯಪುರ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ. |
| 4 | ಮೆ: ಸಂಗಂ ಇಂಡಿಯಾ ಲಿಮಿಟೆಡ್, ಭಿಲ್ವಾರ ರಾಜಸ್ಥಾನ. | 1. ಬೆಂಗಳೂರು ವಿಭಾಗದ ಐದು ಜಿಲ್ಲೆಗಳಾದ ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಮಧುಗಿರಿ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು |

| | | |
|---|---|---|
| | | ಹೆಣ್ಣು ಮಕ್ಕಳಿಗೆ ಎರಡು ಜೊತೆ.<br>2. ಮೈಸೂರು ವಿಭಾಗದ ಒಂದು ಜಿಲ್ಲೆಯಾದ ಚಿಕ್ಕಮಗಳೂರು ಜಿಲ್ಲೆಯ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ. |
| 5 | ಮೆ: ಎಲ್. ಬಿ. ಟೆಕ್ಸ್ ಪ್ರೈವೇಟ್ ಲಿಮಿಟೆಡ್ ಅಹ್ಮದಾಬಾದ್ ಗುಜರಾತ್ | 1. ಕಲಬುರಗಿ ವಿಭಾಗದ ನಾಲ್ಕು ಜಿಲ್ಲೆಗಳಾದ ಬೀದರ, ಕಲಬುರಗಿ, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆಗಳ 1 ರಿಂದ 7 ನೇ ತರಗತಿಯ ಗಂಡು ಹಾಗೂ 1 ರಿಂದ 5 ನೇ ತರಗತಿಯ ಹೆಣ್ಣು ಮಕ್ಕಳಿಗೆ ಒಂದು ಜೊತೆ ಹಾಗೂ 8 ರಿಂದ 10 ನೇ ತರಗತಿಯ ಗಂಡು ಮಕ್ಕಳ ಸೂಟಿಂಗ್ ಬಟ್ಟೆ ಮತ್ತು 6 ರಿಂದ 10 ನೇ ತರೆಗತಿಯ ಹೆಣ್ಣು ಮಕ್ಕಳಿಗೆ 2 ಜೊತೆ. |
| 6 | ಮೆ: ನಂದನ್ ಡಿನಂ ಲಿಮಿಟೆಡ್ ಅಹ್ಮದಾಬಾದ್ ಗುಜರಾತ್ | 1. ಬೆಂಗಳೂರು ವಿಭಾಗದ ಐದು ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಕೋಲಾರ ಮತ್ತು ರಾಮನಗರ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ.<br>2. ಮೈಸೂರು ವಿಭಾಗದ ಒಂದು ಜಿಲ್ಲೆಯಾದ ಮಂಡ್ಯ ಜಿಲ್ಲೆಯ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ.<br>3. ಕಲಬುರಗಿ ವಿಭಾಗದ ಮೂರು ಜಿಲ್ಲೆಗಳಾದ ಕೊಪ್ಪಳ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳ 1 ರಿಂದ 10 ನೇ ತರಗತಿಯ ಗಂಡು ಹಾಗೂ 1 ರಿಂದ 5 ನೇ ತರಗತಿಯ ಹೆಣ್ಣು ಮಕ್ಕಳಿಗೆ ಒಂದು ಜೊತೆ ಹಾಗೂ 8 ರಿಂದ 10 ನೇ ತರಗತಿಯ ಗಂಡು ಮಕ್ಕಳ ಸೂಟಿಂಗ್ ಬಟ್ಟೆ 6 ರಿಂದ 10 ನೇ ತರೆಗತಿಯ ಹೆಣ್ಣು ಮಕ್ಕಳಿಗೆ 2 ಜೊತೆ. |
| 7 | ಮೆ: ಸುನಿಲ್ ಇಂಡಸ್ಟ್ರಿ ಲಿಮಿಟೆಡ್ ಥಾಣೆ ಮಹಾರಾಷ್ಟ್ರ | ಮೈಸೂರು ವಿಭಾಗದ ಆರು ಜಿಲ್ಲೆಗಳಾದ ಚಾಮರಾಜನಗರ, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು ಮತ್ತು ಉಡುಪಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎರಡು ಜೊತೆ. |

2026-27ನೇ ಸಾಲಿಗೆ ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ವಿವಿಧ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲಾಗಿದೆ. ಸಂಸ್ಥೆಗಳು ಈಗಾಗಲೇ ತಾಲ್ಲೂಕುಗಳಿಗೆ ಸಮವಸ್ತ್ರ ಸರಬರಾಜು ಕ್ರಮ ವಹಿಸಿರುತ್ತಾರೆ.

1. ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅನುಬಂಧ-1 ರಲ್ಲಿ ಸೂಚಿಸಿರುವ ಕೋಷ್ಟಕದಂತೆ ವಿವಿಧ ಪರಿಷ್ಕೃತ ಅಳತೆಗಳಿಗೆ ಅನುಗುಣವಾಗಿ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡುತ್ತಾರೆ.
2. ಸಮವಸ್ತ್ರ ಬಟ್ಟೆಗಳನ್ನು ರಾಜ್ಯದಲ್ಲಿನ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡಬೇಕು. ತಾಲ್ಲೂಕು ಮಟ್ಟದವರೆಗೆ ಸರಬರಾಜು ಮಾಡುವ ಸಾಗಾಣಿಕೆ ವೆಚ್ಚ ಸರಬರಾಜು ಸಂಸ್ಥೆಯದ್ದಾಗಿರುತ್ತದೆ.
3. ತಾಲ್ಲೂಕುಗಳಿಂದ ಶಾಲೆಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ಸಾಗಣಿಕೆ ಮಾಡಬೇಕಿದ್ದು, ಸದರಿ ಸಾಗಾಣಿಕಾ ವೆಚ್ಚವಾಗಿ ಪ್ರತಿ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ರೂ.20,000/-ದಂತೆ ಬಿಡುಗಡೆ ಮಾಡಲಾಗುತ್ತದೆ.
4. ಸಮವಸ್ತ್ರದ ಬಟ್ಟೆಯನ್ನು ಮಾತ್ರ ಸರ್ಕಾರದ ವತಿಯಿಂದ ಉಚಿತವಾಗಿ ನೀಡುತ್ತಿದ್ದು, ಹೊಲಿಗೆ ವೆಚ್ಚವನ್ನು ಫಲಾನುಭವಿ ಮಕ್ಕಳ ಪೋಷಕರೇ ಭರಿಸಬೇಕು.

**[ಅ] ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಸಮವಸ್ತ್ರಗಳ ಸರಬರಾಜು ಮತ್ತು ಬಳಕೆಯ ಬಗ್ಗೆ ನಿಬಂಧನೆಗಳು:-**

ಅನುಬಂಧ-1ರ ಕೋಷ್ಟಕದಲ್ಲಿ ವಿವರಿಸಿರುವಂತೆ ವಿವಿಧ ಅಳತೆಗಳಲ್ಲಿ ಸಮವಸ್ತ್ರಗಳನ್ನು ತಾಲ್ಲೂಕುವಾರು, ತರಗತಿವಾರು 2025-26 ನೇ ಸಾಲಿನ SATS ದಾಖಲಾತಿಯಂತೆ (ಅನುಬಂಧ-2) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಾಲಕ ಹಾಗೂ ಬಾಲಕಿಯರ ಸಮವಸ್ತ್ರ ಬಟ್ಟೆಗಳನ್ನು ಸೆಟ್ ರೂಪದಲ್ಲಿ ಸರಬರಾಜು ಮಾಡಲಾಗುತ್ತದೆ.

02. ಸಮವಸ್ತ್ರಗಳ ಸರಬರಾಜು ಕಾರ್ಯದೇಶದಲ್ಲಿ ತಿಳಿಸಿರುವಂತೆ ನಿಗಧಿತ ದಿನಾಂಕದೊಳಗೆ ಆಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು ಅತಿ ಮುಖ್ಯವಾಗಿದ್ದು, ನಿಗದಿತ ಅವಧಿ ಮೀರಿದ ನಂತರದ ಸರಬರಾಜಿಗೆ ನಿಯಮದಂತೆ ಬಟ್ಟೆ ಸ್ವೀಕೃತಗೊಂಡ ದಿನಾಂಕದ ಆಧಾರದ ಮೇಲೆ ಸಂಸ್ಥೆಗೆ ದಂಡವನ್ನು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಕಾರಣ, ಪ್ರತಿ ತಾಲ್ಲೂಕುಗಳಲ್ಲಿ ಸಮವಸ್ತ್ರ ಬಟ್ಟೆಗಳ ಸ್ವೀಕೃತಿ ನೀಡುವಾಗ ಪ್ರತಿ ಸ್ವೀಕೃತಿಯ ಮೇಲೆ ಸ್ವೀಕರಿಸಿದವರು ಸಹಿ ಮಾಡಿ ಸ್ಪಷ್ಟವಾಗಿ ದಿನಾಂಕವನ್ನು ನಮೂದಿಸಿ ಕಛೇರಿ ಮೊಹರನ್ನು ಹಾಕುವುದು ಕಡ್ಡಾಯವಾಗಿದೆ. ತಪ್ಪಿದಲ್ಲಿ ಸ್ವೀಕರಿಸಿದವರು ಸೂಕ್ತ ಸಮಜಾಯಿಷಿ ನೀಡುವುದು ಅವಶ್ಯಕವಾಗುವುದು ಹಗೂ ಮುಂದಿನ ಆಗುಹೊಗುಗಳಿಗೆಜವಾಬ್ದಾರರಾಗಿರುತ್ತಾರೆ. ಈ ಬಗ್ಗೆ ಹಲವಾರು ಬಾರಿ ಸೂಚನೆ ನೀಡಿದಾಗ್ಯೂಸಹ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ದಿನಾಂಕ ನಮೂದಿಸದಿರುವುದು, ಕಛೇರಿ ಮೊಹರು ಹಾಕದಿರುವುದು ಗಮನಕ್ಕೆ ಬಂದಿದ್ದು, ಈ ರೀತಿಯ ನಡವಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂಬುದನ್ನು ಈ ಮೂಲಕ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮೇಲ್ವಿಚಾರಣೆ ಅಧಿಕಾರಿಗಳಾದ ಉಪನಿರ್ದೇಶಕರ ಗಮನಕ್ಕೆ ತರಲಾಗಿದೆ.

03. ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥವಾ ಅವರ ಪರವಾಗಿ ಸಮವಸ್ತ್ರ ಬಟ್ಟೆಗಳನ್ನು ಸ್ವೀಕರಿಸುವವರು ತಮ್ಮ ಹೆಸರು, ಮೊಹರು ಹಾಕಿ ತಪ್ಪದೆ ಸ್ವೀಕರಿಸಿದ ದಿನಾಂಕವನ್ನು ನಮೂದಿಸಿ ಸಹಿ ಮಾಡಿರಬೇಕು. [ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಛೇರಿಯಲ್ಲಿಲ್ಲದಿದ್ದರೆ, ಈ ಅಧಿಕಾರಿಯ ಪರವಾಗಿ ಕಛೇರಿಯಲ್ಲಿನ ಇತರೆ ಅಧಿಕಾರಿ / ಸಿಬ್ಬಂದಿಯವರು ಸಮವಸ್ತ್ರಗಳನ್ನು ಸ್ವೀಕರಿಸಬೇಕು. ಯಾವುದೇ ಅನಗತ್ಯವಾದ ವಿಷಯಗಳನ್ನು ಪ್ರಸ್ತಾಪಿಸಿ ಸರಬರಾಜು ಸಂಸ್ಥೆಯವರಿಗೆ ತೊಂದರೆ ನೀಡಬಾರದೆಂದು ಸ್ಪಷ್ಟ ಪಡಿಸಿದೆ. ಇಂತಹ ವಿಚಾರವಾಗಿ ದೂರು ಬಂದಲ್ಲಿ ತಕ್ಷಣ ಸಂಬಂಧಿಸಿದವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು. ಇದಕ್ಕೆ ಅವಕಾಶ ನೀಡದಂತೆ ಸಮವಸ್ತ್ರಗಳನ್ನು ಸ್ವೀಕರಿಸಬೇಕು].

04. ಸ್ವೀಕೃತಿ ಆದ ನಂತರ ನಮೂನೆ-2ರಲ್ಲಿ ನೀಡಿರುವ ವಿವರಗಳಂತೆ ಸ್ವೀಕೃತ ಸಮವಸ್ತ್ರ ಬಟ್ಟೆಗಳನ್ನು ತಕ್ಷಣವೇ ಸ್ಟಾಕ್ ತೆಗೆದುಕೊಳ್ಳತಕ್ಕದ್ದು.

05. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮಲ್ಲಿ ಕಳೆದ ವರ್ಷಗಳಲ್ಲಿ ಸರಬರಾಜಾಗಿ ಉಳಿಕೆ ಇರುವ ಸಮವಸ್ತ್ರಗಳನ್ನು ನಿಖರವಾಗಿ ಲೆಕ್ಕಾಚಾರ ಮಾಡಿ ಸ್ಟಾಕ್ ಪುಸ್ತಕದಲ್ಲಿ ನಮೂದಿಸಿರತಕ್ಕದ್ದು ಮತ್ತು ಈ ರೀತಿ ಉಳಿಕೆ ಇರುವ ಸಮವಸ್ತ್ರ ಬಟ್ಟೆಗಳ ನಿಖರವಾದ ಮಾಹಿತಿ ವಿವರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳಿಗೆ ನೀಡಿರತಕ್ಕದ್ದು. ಅದೇ ರೀತಿ ಸಮವಸ್ತ್ರಗಳ ಕೊರತೆ ಉಂಟಾದಲ್ಲಿಯೂ ಸಹ ಕೂಡಲೇ ಸಂಬಂಧಿಸಿದ ಉಪನಿರ್ದೇಶಕರಿಗೆ ಕೊರತೆ ಪೂರೈಕೆಗೆ ಕೋರತಕ್ಕದ್ದು, ಮತ್ತು ಅದರ ಒಂದು ಪ್ರತಿಯನ್ನು (ತರಗತಿವಾರು ಹೆಣ್ಣು/ಗಂಡು ಪ್ರತ್ಯೇಕ ಪಟ್ಟಿ ಮಾಡಿ) ಈ ಕಛೇರಿಗೆ ತಪ್ಪದೆ ರವಾನಿಸತಕ್ಕದ್ದು,

06. ಪ್ರತಿ ಉಪನಿರ್ದೇಶಕರ ಕಛೇರಿಯಲ್ಲಿ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕುಗಳಲ್ಲಿ ವರ್ಷಾವಾರು ಸಮವಸ್ತ್ರಬಟ್ಟೆಗಳಿಗೆ ಸಂಬಂಧಿಸಿದ ಹಂಚಿಕೆ ಉಳಿಕೆ ಮುಂತಾದ ವಿವರಗಳ ಪೂರ್ಣ ಮಾಹಿತಿ ಒಂದು ರಿಜಿಸ್ಟರ್‌ನಲ್ಲಿ ನೋಂದಾಯಿಸಿಕೊಂಡು ಕೊರತೆ ಉದ್ಭವಿಸಿದಲ್ಲಿ ಅಂತಹ ತಾಲ್ಲೂಕುಗಳಿಗೆ ಕೂಡಲೇ ಹೆಚ್ಚುವರಿ ಇರುವ ಕಡೆಯಿಂದ ಬಟ್ಟೆಗಳನ್ನು ವರ್ಗಾಯಿಸಿ ಕೊರತೆಯನ್ನು ಸರಿದೂಗಿಸಿ ಸೂಕ್ತ ಮಾಹಿತಿಯನ್ನು ಈ ಕಛೇರಿಗೆ ನೀಡತಕ್ಕದ್ದು. ಯಾವುದೇ ಕಾರಣಕ್ಕೆ ಬಟ್ಟೆಗಳ ಕೊರತೆ ಉಂಟಾಗದಂತೆ ಮತ್ತು ಸರಬರಾಜಾದ ಬಟ್ಟೆಯ ಹೆಚ್ಚುವರಿಯಾದ ದುರ್ಬಳಕೆ ಆಗದಂತೆ ಎಚ್ಚರ ವಹಿಸುವುದು ಮತ್ತು ಸಕಾಲದಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಸರ್ಕಾರಕ್ಕೆ ಯಾವುದೇ ನಷ್ಟ ಆಗದಂತೆ ಕ್ರಮ ವಹಿಸುವುದು ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಈ ಬಗ್ಗೆ ಸಂಪೂರ್ಣ ಎಚ್ಚರಿಕೆಯಿಂದ ಸಕಾಲದಲ್ಲಿ ಸೂಕ್ತ

ಕ್ರಮಗೊಳ್ಳುವಂತೆ ಸೂಚಿಸಲಾಗಿದೆ. ಯಾವುದೇ ತಾಲ್ಲೂಕುಗಳಲ್ಲಿ ಸಮವಸ್ತ್ರಬಟ್ಟೆಯ ಉಳಿಕೆ/ಕೊರತೆ ಉಂಟಾದಲ್ಲಿ ಆ ಬಗ್ಗೆ ಸಕಾಲದಲ್ಲಿ ಸೂಕ್ತ ಕ್ರಮವಹಿಸದೆ ದೂರುಗಳು ಬರದಂತೆ ಹಾಗೂ ಬಟ್ಟೆಗಳ ದುರ್ಬಳಕೆಯಾಗದಂತೆ ಗಮನ ಹರಿಸಿ ತಮ್ಮ ವ್ಯಾಪ್ತಿಗೆ ಬರುವ ತಾಲ್ಲೂಕುಗಳ ಸಮವಸ್ತ್ರಗಳ ಸಮರ್ಪಕ ವಿಲೇವಾರಿಗೆ ಮೇಲ್ವಿಚಾರಣೆ ನಡೆಸುವ ಮೂಲಕ ಸಮಸ್ಯೆಯನ್ನು ಬಗೆಹರಿಸುವುದು.

07. ಈಗಾಗಲೇ ಹಿಂದಿನ ವರ್ಷದ ಉಳಿಕೆ ಸಮವಸ್ತ್ರಗಳು ತಮ್ಮ ಬಳಿಯಲ್ಲಿ ಇದ್ದಲ್ಲಿ ಅದನ್ನು ಸೇರ್ಪಡಿಸಿಕೊಂಡು ಎಲ್ಲಾ ಅರ್ಹ ಫಲಾನುಭವಿ ಮಕ್ಕಳಿಗೆ ವಿತರಿಸಬೇಕು. ಸಮವಸ್ತ್ರಗಳನ್ನು ಶಾಲೆಗೆ ವಿತರಣೆ ಮಾಡಿದ ಬಗ್ಗೆ ಶಾಲೆಯ ಮುಖ್ಯಸ್ಥರಿಂದಲೂ ಸಹ ಸ್ವೀಕೃತಿ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯಲ್ಲಿ ಕಾಯ್ದಿರಿಸತಕ್ಕದ್ದು.

08. ಪ್ರತಿಯೊಂದು ಶಾಲೆಗೂ ಶಾಲೆಯ ಬಾಗಿಲಿನವರೆಗೂ ಸಮವಸ್ತ್ರಗಳನ್ನು ಸರಬರಾಜು ಮಾಡುವ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ. ಯಾವುದೇ ಕಾರಣಕ್ಕೂ ಶಾಲಾ ಮುಖ್ಯಸ್ಥರು, ಶಿಕ್ಷಕರು/ಪ್ರತಿನಿಧಿಗಳ ಮೂಲಕ ಸಮವಸ್ತ್ರ ಸರಬರಾಜು ಕಾರ್ಯ ಕೈಗೊಳ್ಳತಕ್ಕದ್ದಲ್ಲ. ಈ ಬಗ್ಗೆ ದೂರುಗಳು ಬಂದಲ್ಲಿ ಆಯಾ ಬ್ಲಾಕ್‌ಗಳಿಗೆ ನೀಡಲಾದ ಸಾರಿಗೆ ವೆಚ್ಚವನ್ನು ಮರು ವಸೂಲು ಮಾಡಲಾಗುವುದಲ್ಲದೆ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

09. ಸ್ವೀಕರಿಸಿದ ಸಮವಸ್ತ್ರಗಳನ್ನು ಯಾವುದೇ ಕಾರಣಗಳಿಂದ ದೀರ್ಘಕಾಲ ಗೋದಾಮಿನಲ್ಲಿ ಶೇಖರಿಸದೆ ಶಾಲಾ ಮಕ್ಕಳಿಗೆ ವಿತರಿಸುವ ಕಾರ್ಯಕ್ರಮ ತ್ವರಿತವಾಗಿ ನಿರ್ವಹಿಸಬೇಕು. ಈ ಬಗ್ಗೆ ಹಲವಾರು ಬಾರಿ ಸುತ್ತೋಲೆ ನೀಡಿದ್ದರೂ ಸಹ ಮೇಲಾಧಿಕಾರಿಗಳು ತಪಾಸಣೆಗೆ ಬಂದಂತಹ ಸಂದರ್ಭದಲ್ಲಿ ಕೆಲವು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಮವಸ್ತ್ರಗಳು ಹಂಚಿಕೆ ಆಗದೇ ಗೋದಾಮಿನಲ್ಲಿರುವುದನ್ನು ಈ ಹಿಂದೆ ಗಮನಿಸಲಾಗಿದೆ.

10. ಮುಖ್ಯ ಶಿಕ್ಷಕರು ತಮ್ಮ ಶಾಲೆಗೆ ಸರಬರಾಜಾದ ಸಮವಸ್ತ್ರಗಳನ್ನು ಮಕ್ಕಳಿಗೆ ವಿತರಣೆ ಮಾಡಿ ಪ್ರತಿ ಮಗುವಿನಿಂದ ಸ್ವೀಕೃತಿ ಪಡೆದು ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮೂರು ದಿನದೊಳಗೆ ಸ್ವೀಕೃತಿ ಹಂಚಿಕೆ, ಉಳಿಕೆ ವಿವರಗಳೊಂದಿಗೆ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಎಲ್ಲಾ ಅರ್ಹ ಮಕ್ಕಳಿಗೆ ಹಂಚಿಕೆಮಾಡಿ ಉಳಿದ ಸಮವಸ್ತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಿಂದಿರುಗಿಸತಕ್ಕದ್ದು ಎಂಬ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಶಾಲಾ ಮುಖ್ಯಸ್ಥರಿಗೆ ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು. ಮತ್ತು ಸಮವಸ್ತ್ರಗಳ ಸೂಕ್ತ ಬಳಕೆಯ ಬಗ್ಗೆ ನಿಗಾವಹಿಸುವುದು ಮತ್ತು ಯಾವುದೇ ಶಾಲೆಯಲ್ಲಿ ಹೆಚ್ಚುವರಿ ಬಟ್ಟೆ ಸ್ವೀಕರಿಸಿ ಅನಗತ್ಯ ಸ್ಟಾಕ್ ಮಾಡಬಾರದು ಮತ್ತು ದುರ್ಬಳಕೆ ಆಗದಂತೆ ಬಟ್ಟೆಗಳ ಸಮರ್ಪಕ ಉಪಯೋಗಕ್ಕೆ ಸ್ವೀಕೃತಿ/ಹಂಚಿಕೆ ಕ್ರಮದಲ್ಲಿ ವ್ಯತ್ಯಾಸ ಆಗದಂತೆ ನೋಡಿಕೊಳ್ಳುವುದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಅವರ ವ್ಯಾಪ್ತಿಗೊಳಪಟ್ಟ ಎಲ್ಲಾ ಶಾಲೆಗಳ ಮುಖ್ಯಸ್ಥರಿಂದ ಸಮವಸ್ತ್ರಗಳ ಬಳಕೆ ಪ್ರಮಾಣಪತ್ರ ಪಡೆದು ಅದನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಕಾಯ್ದಿರಿಸಿರತಕ್ಕದ್ದು ಮತ್ತು ಇಲಾಖೆಯವರು ಅಥವಾ ಎ.ಜಿ ಆಡಿಟ್ ಸಂದರ್ಭಗಳಲ್ಲಿ ಈ ವಿವರಗಳು ಮತ್ತು ದಾಖಲೆಗಳನ್ನು ತಪಾಸಣೆಗಾಗಿ ಒದಗಿಸತಕ್ಕದ್ದು.

11. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರು ಒಂದು ವಾರದೊಳಗೆ ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಂದ ಬಳಕೆ ಪ್ರಮಾಣ ಪತ್ರ / ಉಳಿಕೆ ಸಮವಸ್ತ್ರಗಳ ವಿವರಗಳನ್ನು ಸ್ವೀಕರಿಸಿ ತಮ್ಮ ತಾಲ್ಲೂಕಿನಲ್ಲಿನ ಬೇಡಿಕೆ/ಉಳಿಕೆ/ಕೊರತೆಯ ಬಗ್ಗೆ ತಕ್ಷಣ ಸಂಬಂಧಿಸಿದ ಉಪನಿರ್ದೇಶಕರಿಗೆ ತಿಳಿಸುವುದು. ಅಗತ್ಯವಿದ್ದಲ್ಲಿ ಸಮೀಪದ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಉಳಿಕೆ / ಕೊರತೆ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅಲ್ಲದೆ ಬೇರೆ ಬೇರೆ ತಾಲ್ಲೂಕುಗಳಲ್ಲಿ ಕೊರತೆ ಇದ್ದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರು ಇತರೆ ತಾಲ್ಲೂಕುಗಳಲ್ಲಿ ಉಳಿಕೆ/ಹೆಚ್ಚುವರಿ ಇರುವ ಸಮವಸ್ತ್ರಗಳನ್ನು ಕೊರತೆ ಇರುವ ತಾಲ್ಲೂಕುಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೊಂದಾಣಿಕೆ ಮಾಡಲು ಅನುಮತಿ ನೀಡಲಾಗಿದೆ.

12. ಈ ವಿವರಗಳನ್ನೆಲ್ಲಾ ಸೇರಿಸಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಮೂನೆ-೧ ರಲ್ಲಿನ ವಿವರಗಳನ್ನು ತುಂಬಿ ಬಳಕೆ ಪ್ರಮಾಣ ಪತ್ರವನ್ನು ನೇರವಾಗಿ ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಇವರಿಗೆ ತಲುಪಿಸತಕ್ಕದ್ದು.
13. ಸರಬರಾಜು ಸಂಸ್ಥೆ ಸಮವಸ್ತ್ರ ಬಟ್ಟೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಕಛೇರಿಗೆ ಸರಬರಾಜು ಮಾಡಲಿದ್ದು, ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪತ್ರಾಂಕಿತ ವ್ಯವಸ್ಥಾಪಕರು / ಅಧೀಕ್ಷಕರು ಯಾರಾದರೊಬ್ಬರು ಕಛೇರಿ ವೇಳೆ ಮುಗಿದ ನಂತರವೂ ಕಾಯ್ದಿದ್ದು ಸಮವಸ್ತ್ರಗಳನ್ನು ಸ್ವೀಕರಿಸತಕ್ಕದ್ದು. ಈ ಬಗ್ಗೆ ದೂರುಗಳು ಬಂದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು. [ನಿಖರವಾದ ಸರಬರಾಜು ದಿನಾಂಕವನ್ನು ಸಂಸ್ಥೆಯವರು ದೂರವಾಣಿ ಮೂಲಕ/ಪತ್ರ ಮುಖೇನ ತಿಳಿಸುವರು] ಈ ಕಾರ್ಯಕ್ಕಾಗಿ ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಸಮವಸ್ತ್ರ, ಸರಬರಾಜು/ಹಂಚಿಕೆ ಕಾರ್ಯ ಮುಗಿಯುವವರೆಗೆ ತಾತ್ಕಾಲಿಕವಾಗಿ ಒಬ್ಬರು ನೋಡಲ್ ಅಧಿಕಾರಿಯನ್ನು ನೇಮಿಸಿಕೊಳ್ಳತಕ್ಕದ್ದು.
14. ಈ ಪ್ರಕ್ರಿಯೆ ಮುಗಿಯುವವರೆವಿಗೂ ಉಪನಿರ್ದೇಶಕರು [ಆಡಳಿತ] ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಮವಸ್ತ್ರ ಬಟ್ಟೆಗಳ ಹಂಚಿಕೆ / ವಿತರಣೆ/ ಉಳಿಕೆ/ಕೊರತೆ ಬಗ್ಗೆ ಹಾಗೂ ಕೊರತೆ ಬಿದ್ದಲ್ಲಿ ಹೆಚ್ಚುವರಿ ಇರುವ ಕಡೆಯಿಂದ ಹೊಂದಾಣಿಕೆ ಮಾಡುವ ಪ್ರಕ್ರಿಯೆಯನ್ನು ಪ್ರತಿ ದಿನ ಮಾನಿಟರ್ ಮಾಡಬೇಕು. ಮತ್ತು ಸಮವಸ್ತ್ರಗಳ ಹಂಚಿಕೆ/ಬಳಕೆ/ಉಳಿಕೆಯ ಬಗ್ಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರ ಇ-ಮೇಲ್ ವಿಳಾಸಕ್ಕೆ ಪ್ರತಿ ವಾರಕ್ಕೊಮ್ಮೆ ಇ-ಮೇಲ್ ಮೂಲಕ ಮಾಹಿತಿ ತಪ್ಪದೆ ಸಲ್ಲಿಸುತ್ತಿರತಕ್ಕದ್ದು.
15. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಕಛೇರಿಯಲ್ಲಿನ ಸ್ಟಾಕ್ ರಿಜಿಸ್ಟರನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು. ಈ ರಿಜಿಸ್ಟರನ್ನು ಉಪನಿರ್ದೇಶಕರು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಗಮನಕ್ಕೆ ತಂದು ಉಪನಿರ್ದೇಶಕರ ಸಹಿ ಪಡೆದಿರತಕ್ಕದ್ದು.
16. ಸಮವಸ್ತ್ರ ಬಟ್ಟೆಗಳ ಹಂಚಿಕೆ / ವಿತರಣೆಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟೀಕರಣ ಅವಶ್ಯವಿದ್ದಲ್ಲಿ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ನೇರವಾಗಿ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] ರವರನ್ನು ಸಂಪರ್ಕಿಸಬಹುದು.
17. ಸಮವಸ್ತ್ರದ ಸರಬರಾಜಿಗೆ ಹಿಂದಿನ ಸಾಲಿನ ಸ್ಯಾಟ್ಸ್ ಅಂಕಿ ಅಂಶವನ್ನೇ ಬಳಸಿಕೊಳ್ಳಲಾಗಿದೆ(ಅನುಬಂದ-01). ಒಂದು ವೇಳೆ ಸಮವಸ್ತ್ರ ಬಟ್ಟೆಗಳಲ್ಲಿ ಕೊರತೆಯಾದಲ್ಲಿ ಯಾವ ಶಾಲೆಗಳಲ್ಲಿ ಕೊರತೆ ಇದೆ ಎಂಬುದಕ್ಕೆ ಶಾಲೆಯ ಹೆಸರು ಮಕ್ಕಳ ಸಂಖ್ಯೆ [ತರಗತಿವಾರು ಹೆಣ್ಣು ಮತ್ತು ಗಂಡು ಮಕ್ಕಳ ಪ್ರತ್ಯೇಕ ವಿವರಗಳ] ಸಹಿತ ಆಯಾ ತಾಲ್ಲೂಕಿನ ಒಟ್ಟು ಬೇಡಿಕೆಯನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸುವುದು. ಈ ರೀತಿ ಬೇಡಿಕೆ ಸಲ್ಲಿಸುವ ಮುನ್ನ ತಾಲ್ಲೂಕಿನಲ್ಲಿನ ಬೇರೆ ಶಾಲೆಗಳಲ್ಲಿ ಉಳಿದಿರುವ ಸಮವಸ್ತ್ರಗಳ ಬಗ್ಗೆ ಪರಿಶೀಲಿಸಿ, ಉಳಿಕೆ ಇದ್ದಲ್ಲಿ ಅವುಗಳನ್ನು ಮೊದಲು ಬಳಸಿಕೊಳ್ಳುವುದು ಮತ್ತು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಸಮೀಪದ ಕ್ಷೇತ್ರ ಶಿಕ್ಷಣಾಧಿಕಾರಿಗಳಲ್ಲಿ ಉಳಿಕೆ ಇರುವ ಬಗ್ಗೆ ಮಾಹಿತಿ ಪಡೆದು ದೃಢಪಡಿಸಿಕೊಂಡು ಮೇಲ್ಕಂಡ ನಿಬಂಧನೆ 13ರಲ್ಲಿ ವಿವರಿಸಿರುವ ಪ್ರಕಾರ ಹೊಂದಾಣಿಕೆ ಮಾಡಿಕೊಳ್ಳುವುದು. ಈ ರೀತಿ ಎರಡೂ ರೀತಿಯ ಹೊಂದಾಣಿಕೆ ಮಾಡಿದ ನಂತರವೂ ಕೊರತೆ ಇದ್ದಲ್ಲಿ ಮಾತ್ರ ಈ ಕಛೇರಿಗೆ ಕಡ್ಡಾಯವಾಗಿ ನಮೂನೆ-2ರಲ್ಲಿ ಮಾಹಿತಿ ಒದಗಿಸಬೇಕು. ಹೀಗೆ ಕೊರತೆ ಹೆಚ್ಚುವರಿ ಉಳಿಕೆ ಇದ್ದಲ್ಲಿ ಸಕಾಲದಲ್ಲಿ ನಿಖರವಾದ ಬೇಡಿಕೆ ಒದಗಿಸದೆ ಇರುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.
18. ಎರಡು ಜೊತೆ ಸಮವಸ್ತ್ರಗಳು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸರಬರಾಜಾದ ನಂತರ ಶಾಲೆಗಳಿಗೆ ವಿತರಿಸಿರುವ ಬಗ್ಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಮಕ್ಕಳಿಗೆ ವಿತರಿಸಿರುವ ಬಗ್ಗೆ ಸಂಬಂಧಿಸಿದ ಮುಖ್ಯ ಶಿಕ್ಷರು SATSನಲ್ಲಿ ಮಾಹಿತಿಯನ್ನು ಇಂದೀಕರಿಸುವುದು.

**[ಆ] ಸಮವಸ್ತ್ರ ಬಟ್ಟೆಗಳ ಗುಣಮಟ್ಟ:**

01. ಸರಬರಾಜಾದ ಸಮವಸ್ತ್ರ ಬಟ್ಟೆಯ ಗುಣಮಟ್ಟ ಪರೀಕ್ಷೆ ಸಂಬಂಧ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಸಮವಸ್ತ್ರ ಬಟ್ಟೆ ಸರಬರಾಜಾದ ಎರಡು ವಾರದ ಒಳಗಾಗಿ ಆಯಾ ಜಿಲ್ಲಾ ಉಪನಿರ್ದೇಶಕರು ಪ್ರತಿ ತಾಲ್ಲೂಕಿನಿಂದ ಪ್ರತಿ ವಿಧದ ಒಂದು ಬಟ್ಟೆಯನ್ನು ರ್‍ಯಾಂಡಮ್ ಆಗಿ ಪಡೆದು ಸರಬರಾಜುದಾರ ಸಂಸ್ಥೆಯ ಹೆಸರಿನೊಂದಿಗೆ ಪ್ಯಾಕ್ ಮಾಡಿ ಕಛೇರಿ ಮೊಹರಿನೊಂದಿಗೆ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)ರವರ ಕಛೇರಿಗೆ ಖುದ್ದಾಗಿ ಸಲ್ಲಿಸತಕ್ಕದ್ದು. ಪ್ರತಿ ತಾಲ್ಲೂಕಿನಿಂದ ಯಾವುದಾದರೂ ತರಗತಿಯ ಒಂದು ಷರ್ಟ್ ಬಟ್ಟೆ, ಒಂದು ಪ್ಯಾಂಟ್/ನಿಕ್ಕರ್ ಬಟ್ಟೆ, ಒಂದು ಸ್ಕರ್ಟ್ ಬಟ್ಟೆ, ಒಂದು ಚೂಡೀದಾರ್ ಟಾಪ್, ಒಂದು ಚೂಡೀದಾರ್ ಬಾಟಮ್, ಒಂದು ಚೂಡೀದಾರ್ ದುಪಟ್ಟಾ ಅಂದರೆ ಪ್ರತಿ ತಾಲ್ಲೂಕಿನಿಂದ 6 ಸ್ಯಾಂಪಲ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮವಸ್ತ್ರ ನೋಡಲ್ ಅಧಿಕಾರಿ ಹಾಗೂ ಓರ್ವ ಮುಖ್ಯ ಶಿಕ್ಷಕರ ಸಮಿತಿ ರಚಿಸಿ ಸ್ಯಾಂಪಲ್ ಡ್ರಾ ಮಾಡಲು ತಿಳಿಸಿದೆ.
02. ಉಪನಿರ್ದೇಶಕರು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕುಗಳಿಂದ ಸಮವಸ್ತ್ರ ಸರಬರಾಜಾದ ಎರಡು ವಾರಗಳ ಒಳಗಾಗಿ ಸ್ಯಾಂಪಲ್‌ಗಳನ್ನು ಪಡೆದು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ, ಇದರಲ್ಲಿ ವಿಳಂಬ ಮಾಡದೆ ಬಟ್ಟೆಗಳು ಸರಬರಾಜಾದ ಕೂಡಲೇ ಸ್ಯಾಂಪಲ್‌ಗಳನ್ನು ಸಲ್ಲಿಸಲು ತಿಳಿಸಿದೆ. ಪ್ರತಿ ತಾಲ್ಲೂಕಿನ ಸ್ಯಾಂಪಲ್ ಬಂಡಲ್ ಮೇಲೆ ಸಮವಸ್ತ್ರ ಸರಬರಾಜಾದ ದಿನಾಂಕ, ಸ್ಯಾಂಪಲ್ ಕಳುಹಿಸುತ್ತಿರುವ ದಿನಾಂಕ, ಸರಬರಾಜುದಾರ ಸಂಸ್ಥೆಯ ಹೆಸರು, ಯಾವ ಸಾಲಿಗೆ ಸರಬರಾಜಾದ ಸಮವಸ್ತ್ರ ಈ ಎಲ್ಲಾ ಮಾಹಿತಿಯನ್ನು ತಪ್ಪದೇ ನಮೂದಿಸಲು ತಿಳಿಸಿದೆ.
03. ಕಲಬುರ್ಗಿ ವಿಭಾಗದ ಮೊದಲನೇ ಜೊತೆ (ಶರ್ಟಿಂಗ್, ಸೂಟಿಂಗ್ ಮತ್ತು ಸ್ಕರ್ಟಿಂಗ್) ಸಮವಸ್ತ್ರಗಳ 1 ರಿಂದ 07ನೇ ತರಗತಿ ಗಂಡು ಹಾಗೂ 1 ರಿಂದ 5ನೇ ತರಗತಿ ಹೆಣ್ಣು ಮಕ್ಕಳಿಗೆ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆ ಸರಬರಾಜು ಮಾಡುವುದರಿಂದ ಸದರಿ ಸ್ಯಾಂಪಲ್‌ಗಳನ್ನು ಪ್ರತ್ಯೇಕವಾಗಿ ಹಾಗೂ ಚೂಡಿದರ್ ಮತ್ತು ಎರಡನೇ ಜೊತೆ ಸಮವಸ್ತ್ರಗಳನ್ನು ಮೆ: ಅರವಿಂದ ಕಾಟ್ಸಿನ್, ಈಚಲಕಾರಂಜಿ ಮಹರಾಷ್ಟ್ರ, ಮೆ:ಸಂಗಂ ಇಂಡಿಯಾ, ಭಿಲ್ವಾರ, ರಾಜಸ್ತಾನ, ಮೆ: ಎಲ್. ಬಿ. ಟೆಕ್ಸ್ ಪ್ರೈವೇಟ್ ಲಿಮಿಟೆಡ್ ಅಹ್ಮದಾಬಾದ್ ಗುಜರಾತ್, ಮೆ: ನಂದನ್ ಡೆನಿಮ್ ಲಿಮಿಟೆಡ್ ಅಹ್ಮದಾಬಾದ್ ಗುಜರಾತ್ ಹಾಗೂ ಮೆ: ಸುನಿಲ್ ಇಂಡಸ್ಟ್ರಿ ಲಿಮಿಟೆಡ್ ಥಾಣೆ ಮಹಾರಾಷ್ಟ್ರ ಸಂಸ್ಥೆ ಸರಬರಾಜು ಮಾಡುವುದರಿಂದ ಸದರಿ ಸ್ಯಾಂಪಲ್‌ಗಳನ್ನು ಪ್ರತ್ಯೇಕವಾಗಿ ನೀಡಲು ತಿಳಿಸಿದೆ.

ಮೇಲ್ಕಂಡ ನಿರ್ದೇಶನಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಪರಿಗಣಿಸುವುದು. ಸದರಿ ಕಾರ್ಯದಲ್ಲಿ ಯಾವುದೇ ಲೋಪವಾಗಿರುವುದು ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
(ಆಯುಕ್ತರ ಆದೇಶದ ಮೇರೆಗೆ)

21/4/2026.
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ:
01. ಸರ್ಕಾರದ ಅಪಾರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ.
02. ಅಪರ ಆಯುಕ್ತರು, ಕಲಬುರಗಿ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ.
03. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾಹಿತಿಗಾಗಿ / ಜಿಲ್ಲಾ ಉಪ ನಿರ್ದೇಶಕರು [ಆಡಳಿತ] ಮತ್ತು ರಾಜ್ಯರ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಉಪನಿರ್ದೇಶಕರ ಮುಖಾಂತರ ಸೂಕ್ತ ಕ್ರಮಕ್ಕಾಗಿ.

04. ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ ವಾಣಿಜ್ಯ ಸಂಕೀರ್ಣ, ಹಲಸೂರು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

05. ಮಹಾಲೇಖಪಾಲರು [ಎ ಅಂಡ್ ಇ] ಕರ್ನಾಟಕ, ಬೆಂಗಳೂರು.

06. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆಯುಕ್ತರ ಆರ್ಥಿಕ ಸಲಹೆಗಾರರು, ಆಯುಕ್ತರ ಕಛೇರಿ, ಬೆಂಗಳೂರು.

07. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು/ ಜಂಟಿ ನಿರ್ದೇಶಕರು / ವಿಭಾಗೀಯ ಸಹ ನಿರ್ದೇಶಕರು ಇವರಿಗೆ ಮಾಹಿತಿಗಾಗಿ.

08. ಉಪ ನಿರ್ದೇಶಕರು [ಯೋಜನೆ], ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು.

09. ಲೆಕ್ಕಾಧಿಕಾರಿಗಳು, ಆಯವ್ಯಯ, ಲೆಕ್ಕ ಸಂಶೋಧನೆ ಮತ್ತು ರಿಕನ್ಸಿಲೇಷನ್ ಶಾಖೆಗಳು, ಆಯುಕ್ತರ ಕಛೇರಿ, ಬೆಂಗಳೂರು.

## ಅನುಬಂಧ-1

| ಕ್ರ. ಸಂ | ಬಟ್ಟೆಯ ವಿವರ | ಬಣ್ಣ |
|---|---|---|
| 1 | ಗಂಡು/ಹೆಣ್ಣು ಮಕ್ಕಳ ಮೇಲಂಗಿ ಬಟ್ಟೆ [ಪಾಲಿಯೆಸ್ಟರ್ ವಿಸ್ಕೋಸ್ ಷರ್ಟಿಂಗ್] | ಲೈಟ್ ಬ್ಲೂ |
| 2 | ಗಂಡು ಮಕ್ಕಳ ನಿಕ್ಕರ್/ ಪ್ಯಾಂಟ್ ಬಟ್ಟೆ [ಪಾಲಿಯೆಸ್ಟರ್ ಕಾಟನ್ ಸೂಟಿಂಗ್] | ನೇವಿ ಬ್ಲೂ |
| 3 | ಹೆಣ್ಣುಮಕ್ಕಳ ಸ್ಕರ್ಟ್ ಬಟ್ಟೆ [2/40 ಪಿ.ವಿ.ಬಟ್ಟೆ] | ನೇವಿ ಬ್ಲೂ |
| 4 | ಹೆಣ್ಣು ಮಕ್ಕಳ ಚೂಡಿದಾರ್ ಟಾಪ್ | ಐದು ಬಣ್ಣ ಮಿಶ್ರಿತ ಚಕ್ಸ್ ಬಟ್ಟೆ(ಹಸಿರು, ಕೆಂಪು,ಬಿಳಿ,ಕಪ್ಪು,ಹಳದಿ). |
| 5 | ಹೆಣ್ಣು ಮಕ್ಕಳ ಚೂಡಿದಾರ್ ಬಾಟಮ್ | ಹಸಿರು |
| 6 | ಹೆಣ್ಣು ಮಕ್ಕಳ ಚೂಡಿದಾರ್ ದುಪಟ್ಟಾ | ಹಸಿರು |

## ತರಗತಿವಾರು ಅಳತೆ

| Classes | Items | Measurement in running meters | Width |
|---|---|---|---|
| I & II | Boys - Half Pant | 0.50 mtrs | 54" |
| | Boys - Shirt | 1.10 mtrs | 36" |
| | Girls – Skirt | 1.20 mtrs | 36" |
| | Girls – Shirt | 1.10 mtrs | 36" |
| III & IV | Boys - Half Pant | 0.55 mtrs | 54" |
| | Boys - Shirt | 1.20 mtrs | 36" |
| | Girls – Skirt | 1.40 mtrs | 36" |
| | Girls – Shirt | 1.20 mtrs | 36" |
| V to VII | Boys - Half Pant | 0.60 mtrs | 54" |
| | Boys - Shirt | 1.40 mtrs | 36" |
| VIII to X | Boys - Shirt | 2.00 mtrs | 36” |
| | Boys – Pant | 1.20 mtrs | 54” |
| V | Girls – Shirt | 1.50 mtrs | 36" |
| | Girls – Skirt | 1.75 mtrs | 36" |
| VI & VII | Girls – top | 2.00mtrs | 36" |
| | Girls – bottom | 1.90mtrs | 36" |
| | Girls- Dupatta | 1.70mtrs | 36’’ |

| | | | |
|---|---|---|---|
| VIII | Girls – top | 2.10mtrs | 36" |
| | Girls – bottom | 2.00mtrs | 36" |
| | Girls- Dupatta | 1.80mtrs | 36'' |
| IX & X | Girls – top | 2.25mtrs | 36" |
| | Girls – bottom | 2.00mtrs | 36" |
| | Girls-dupatta. | 2.00mtrs | 36'' |

**ನಮೂನೆ - 01**

ವಿದ್ಯವಿಕಾಸ ಯೋಜನೆಯಡಿ 2026-27 ನೇ ಸಾಲಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸರಬರಾಜದ ಸಮವಸ್ತ್ರ ಬಟ್ಟೆಗಳನ್ನು ತೆಗೆದುಕೊಳ್ಳಬೇಕಾದ ನಮೂನೆ (ಮೊದಲನೇ ಜೊತೆ/ಎರಡನೇ ಜೊತೆ)

| ಕ್ರ ಸಂ | ತರಗತಿ | ಬಟ್ಟೆಯ ವಿವರ | 2026-27 ರ ಪ್ರಾರಂಭದಲ್ಲಿ ಬಾಕಿ ಇದ್ದಂತೆ ಸಮವಸ್ತ್ರ, ಬಟ್ಟೆಗಳ ಸಂಖ್ಯೆ / ಸ್ಟಾಕ್ | 2026-27ನೇ ಸಾಲಿಗೆ ಸರಬರಾಜಾದ ಸಮವಸ್ತ್ರಗಳ ಸಂಖ್ಯೆ | 2026-27ನೇ ಸಾಲಿನಲ್ಲಿನ ಒಟ್ಟು ವಿತರಣೆ | ಉಳಿಕೆ | ಕೊರತೆ | ಬೇರೆ ಬ್ಲಾಕ್ ಜಿಲ್ಲೆಗಳಿಗೆ ನೀಡಿದ ಸಮವಸ್ತ್ರ, ಸೆಟ್‌ಗಳ ಸಂಖ್ಯೆ | ಬೇರೆ ಬ್ಲಾಕ್ ಜಿಲ್ಲೆಗಳಿಂದ ಸ್ವೀಕರಿಸಿದ ಸಮವಸ್ತ್ರ, ಸೆಟ್‌ಗಳ ಸಂಖ್ಯೆ | ಅಂತಿಮ ಶಿಲ್ಕು | ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಪರಿಶೀಲನೆ ಮಾಡಿದ ಅಧಿಕಾರಿಯ ಸಹಿ ಮೊಹರಿನೊಂದಿಗೆ |
|---|---|---|---|---|---|---|---|---|---|---|---|
| **ಗಂಡು ಮಕ್ಕಳ ಸಮವಸ್ತ್ರ ಬಟ್ಟೆಯ ವಿವರ** | | | | | | | | | | | |
| 1 | 1 – 2 | ನಿಕ್ಕರ್ | | | | | | | | | |
| | | ಶರ್ಟ್ | | | | | | | | | |
| 2 | 3 – 4 | ನಿಕ್ಕರ್ | | | | | | | | | |
| | | ಶರ್ಟ್ | | | | | | | | | |
| 3 | 5, 6, 7 | ನಿಕ್ಕರ್ | | | | | | | | | |
| | | ಶರ್ಟ್ | | | | | | | | | |
| 4 | 8, 9, 10 | ಪ್ಯಾಂಟ್ | | | | | | | | | |
| | | ಶರ್ಟ್ | | | | | | | | | |
| **ಹೆಣ್ಣು ಮಕ್ಕಳ ಸಮವಸ್ತ್ರ ಬಟ್ಟೆಯ ವಿವರ** | | | | | | | | | | | |
| 1 | 1 – 2 | ಸ್ಕರ್ಟ್ | | | | | | | | | |
| | | ಶರ್ಟ್ | | | | | | | | | |

| | | | | | | | | | | | |
|---|---|---|---|---|---|---|---|---|---|---|---|
| 2 | 3 – 4 | ಸ್ಕರ್ಟ್ | | | | | | | | | |
| | | ಶರ್ಟ್ | | | | | | | | | |
| 3 | 5 | ಸ್ಕರ್ಟ್ | | | | | | | | | |
| | | ಶರ್ಟ್ | | | | | | | | | |
| | | ಚೂಡಿದಾರ್ ಟಾಪ್ | | | | | | | | | |
| 4 | 6–7 | ಚೂಡಿದಾರ್ ಬಾಟಮ್ | | | | | | | | | |
| | | ಚೂಡಿದಾರ್ ದುಪಟ್ಟಾ | | | | | | | | | |
| 5 | 8 | ಚೂಡಿದಾರ್ ಟಾಪ್ | | | | | | | | | |
| | | ಚೂಡಿದಾರ್ ಬಾಟಮ್ | | | | | | | | | |
| | | ಚೂಡಿದಾರ್ ದುಪಟ್ಟಾ | | | | | | | | | |
| 6 | 9,10 | ಚೂಡಿದಾರ್ ಟಾಪ್ | | | | | | | | | |
| | | ಚೂಡಿದಾರ್ ಬಾಟಮ್ | | | | | | | | | |
| | | ಚೂಡಿದಾರ್ ದುಪಟ್ಟಾ | | | | | | | | | |

ಸಹಿ :

ಹೆಸರು ಮತ್ತು ಮೊಹರು :

**ನಮೂನೆ – 02**

**ಸಮವಸ್ತ್ರ ಕೊರತೆಯ ತಾಲ್ಲೂಕುಗಳ ಪಟ್ಟಿ. 2026-27 (ಮೊದಲನೇ ಜೊತೆ/ ಎರಡನೇ ಜೊತೆ)**

| ಕ್ರ ಸಂ | ತಾಲ್ಲೂಕು | 1 ಮತ್ತು 2ನೇ ತರಗತಿ | | 3 ಮತ್ತು 4ನೇ ತರಗತಿ | | 5 ರಿಂದ 7ನೇ ತರಗತಿ | 5ನೇ ತರಗತಿ | 6,7 ನೇ ತರಗತಿ | 8 ನೇ ತರಗತಿ | | 9 ನೇ ತರಗತಿ | | 10 ನೇ ತರಗತಿ | |
|---|---|---|---|---|---|---|---|---|---|---|---|---|---|---|
| | | ಗಂ | ಹೆ | ಗಂ | ಹೆ | ಗಂ | ಹೆ | ಹೆ | ಗಂ | ಹೆ | ಗಂ | ಹೆ | ಗಂ | ಹೆ |
| 01. | | | | | | | | | | | | | | |
| 02. | | | | | | | | | | | | | | |
| 03. | | | | | | | | | | | | | | |
| 04. | | | | | | | | | | | | | | |
| 05. | | | | | | | | | | | | | | |
| 05 | | | | | | | | | | | | | | |

**ಪ್ರಮಾಣ ಪತ್ರ:**

1. ಕೊರತೆಯನ್ನು ನಮ್ಮ ವಲಯಕ್ಕೆ ಪೂರೈಕೆ ಮಾಡಿದ ಸಮವಸ್ತ್ರಗಳನ್ನು ಎಲ್ಲಾ ಶಾಲೆಗಳಿಗೂ ವಿತರಿಸಿದ ನಂತರ ಉಂಟಾಗಿರುವ ಕೊರತೆ ಎಂದು ದೃಢೀಕರಿಸಿದೆ.
2. ಈ ಕೊರತೆ ಬಗ್ಗೆ ಪ್ರಸ್ತಾವನೆ ಕಳಿಸುವ ಮುನ್ನಾ ಬೇರೆ ಶಾಲೆಗಳಲ್ಲಿ/ತಾಲ್ಲೂಕುಗಳಲ್ಲಿ ಉಳಿದಿದ್ದ ಎಲ್ಲಾ ಸಮವಸ್ತ್ರಗಳನ್ನು ಬಳಸಿಕೊಂಡ ನಂತರ ಉಂಟಾದ ಕೊರತೆ ಎಂದು ಹಾಗೂ ಸಮೀಪದ ಕ್ಷೇತ್ರ ಶಿಕ್ಷಣಾಧಿಕಾರಿಗಳಲ್ಲಿ ಸಮವಸ್ತ್ರ ಉಳಿಕೆ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡ ನಂತರ ಈ ಬೇಡಿಕೆ ಸಲ್ಲಿಸಿರುವುದೆಂದು ದೃಢೀಕರಿಸಿದೆ.
3. ಈ ಮಾಹಿತಿಯನ್ನು ಸಂಬಂಧಿಸಿದ ಶಿಕ್ಷಣ ಸಂಯೋಜಕರಿಂದ ಖುದ್ದು ಪರಿಶೀಲನೆ ನಡೆಸಿ ವರದಿ ಪಡೆದ ನಂತರವೇ ತಂಯಾರಿಸಲಾಗಿದೆ ಎಂದು ದೃಢೀಕರಿಸಿದೆ.

ಉಪನಿರ್ದೇಶಕರು

________________ಜಿಲ್ಲೆ